# ಗುರುಕೃಪೆಯೆಂಬ ಕಲ್ಪತರು

**ಎಲ್.ಜಿ. ನಾಗೇಶರಾವ್**

ಕಲ್ಕತ್ತೆಯ ಕಾಶೀಪುರದ ತೋಟದ ಮನೆಯಲ್ಲಿದ್ದುಕೊಂಡು ಚಿಕಿತ್ಸೆ ಪಡೆಯುತ್ತಿದ್ದ ಶ್ರೀರಾಮಕೃಷ್ಣರು ಕ್ರಿ.ಶ. ೧೮೮೬ರ ಜನವರಿ ೧ರಂದು ಹಲವು ಮಂದಿ ಭಕ್ತರ ಪಾಲಿಗೆ 'ಕಲ್ಪತರು'ವಾಗಿ ವಿಶೇಷ ಅನುಗ್ರಹ ಮಾಡಿದರು. ಈ ಅಸಾಮಾನ್ಯ ಘಟನೆಯು ಶ್ರೀರಾಮಕೃಷ್ಣರ ಅಹೇತುಕ ಕೃಪೆಯನ್ನು ಪ್ರಕಾಶಪಡಿಸುತ್ತದೆ. ಇದರ ನೆನಪಿಗಾಗಿ ಪ್ರತಿವರ್ಷ ಜನವರಿ ೧ ರಂದು **'ಕಲ್ಪತರು ದಿನ'**ವೆಂದು ಶ್ರೀರಾಮಕೃಷ್ಣರನ್ನು ಆರಾಧಿಸಲಾಗುತ್ತಿದೆ. ಈ ಬಗ್ಗೆ ಬರೆದಿರುವ ಲೇಖಕರು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಹಾಯಕ ರಿಜಿಸ್ಟ್ರಾರ್ ಆಗಿ ಸೇವೆ ಸಲ್ಲಿಸಿ, ನಿವೃತ್ತರಾಗಿದ್ದಾರೆ. ಬೆಂಗಳೂರು ಆಶ್ರಮದ ಭಕ್ತರಾದ ಅವರು ಭಾಷಾಂತರವೇ ಮೊದಲಾದ ಹಲವು ಸಾಹಿತ್ಯಿಕ ಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ.



ಶ್ರೀರಾಮಕೃಷ್ಣರು ತಮ್ಮ ಬಳಿಗೆ ಬಂದವರಿಗೆಲ್ಲ ಉಪದೇಶಾಮೃತವನ್ನು ನೀಡುತ್ತಿದ್ದರು; ದಕ್ಷಿಣೇಶ್ವರಕ್ಕೆ ನೂರಾರು ಭಕ್ತರು ಬರಲಾರಂಭಿಸಿದರು — ಇವು ಅವರ ಮಹಾಸಮಾಧಿಗೆ ಮುನ್ನ ೪ ರಿಂದ ೫ ವರ್ಷಗಳ ಹಿಂದಿನ ಘಟನೆಗಳು. ಅವರ ಸಣ್ಣ ಕೊಠಡಿಯು ಸದಾ ಜನರಿಂದ ತುಂಬಿರುತ್ತಿತ್ತು. ಶ್ರೀರಾಮಕೃಷ್ಣರು ತಮ್ಮ ಅನಾರೋಗ್ಯ ಅಥವಾ ತೊಂದರೆಯನ್ನು ಲೆಕ್ಕಿಸದೆ ಬಂದ ಜನರಿಗೆ ಉಪದೇಶ ನೀಡುತ್ತಿದ್ದರು. ಅವರಿಗೆ ಊಟಕ್ಕೆ ಸ್ವಲ್ಪ ಸಮಯ ದೊರೆಯುವುದೂ, ದೇಹಕ್ಕೆ ಸ್ವಲ್ಪ ವಿರಾಮ ದೊರೆಯುವುದೂ ಕಷ್ಟವಾಗುತ್ತಿತ್ತು. ಎಲ್ಲರ ಕಷ್ಟಗಳಿಗೂ ಅವರ ಹೃದಯ ಸ್ಪಂದಿಸುತ್ತಿತ್ತು. ಕೆಲವು ವೇಳೆ ಅವರು ಭಕ್ತಿಗೀತೆಗಳನ್ನು ಹಾಡಿ ಜನರಲ್ಲಿ ಸ್ಫೂರ್ತಿಯನ್ನು ಉಂಟುಮಾಡುತ್ತಿದ್ದರು. ಕೆಲವೊಮ್ಮೆ ಜ್ಞಾನದಾಯಕ ವಚನಗಳನ್ನು ಹೇಳುತ್ತಿದ್ದರು. ಕೆಲವು ಸಲ ತಮ್ಮ ಆಧ್ಯಾತ್ಮಿಕ ಅನುಭವಗಳನ್ನು ಹೇಳುತ್ತಿದ್ದರು. ಕೆಲವೊಮ್ಮೆ ಭಕ್ತರು ಹಾಡುತ್ತಿದ್ದ ಕೀರ್ತನೆಗಳಿಂದ ಪರಿಸರವು ತುಂಬಿಹೋಗುತ್ತಿತ್ತು. ಯಾರು ಶ್ರೀರಾಮಕೃಷ್ಣರ ನಿಕಟ ಸಂಪರ್ಕಕ್ಕೆ ಬಂದರೂ, ಅವರಿಗೆ ಭಗವಂತನನ್ನು ಕಾಣುವ ತೀವ್ರ ಆಸಕ್ತಿ ಉಂಟಾಗುತ್ತಿತ್ತು. ಹೂವುಗಳು ಅರಳಿದಾಗ ದುಂಬಿಗಳು ತಾವಾಗಿಯೇ ಮಕರಂದಕ್ಕಾಗಿ ಬರುತ್ತವೆ. ಶ್ರೀರಾಮಕೃಷ್ಣರ ವಿಷಯದಲ್ಲೂ ಹಾಗೆಯೇ ಆಯಿತು. ಎಲ್ಲ ರೀತಿಯ ಮತ, ಪಂಥಗಳ ಜನರು ಅವರ ಸುತ್ತ ಸುತ್ತಿಕೊಂಡರು. ಅವರು ಬಾಳಿದ ಐವತ್ತು ವರ್ಷಗಳ ಜೀವನವು ಮಾನವ ಜನಾಂಗದ ಆಧ್ಯಾತ್ಮಿಕ ಚರಿತ್ರೆಯನ್ನು ಭಟ್ಟಿ ಇಳಿಸಿದಂತೆ ಇತ್ತು ಎಂದು ಹೇಳುತ್ತಾರೆ.

ಶ್ರೀರಾಮಕೃಷ್ಣರಿಗೆ ಆಗಾಗ ಉಂಟಾಗುತ್ತಿದ್ದ ಸಮಾಧಿ ಮತ್ತು ನಿರಂತರವಾಗಿ ಅವರು ಶಿಷ್ಯರಿಗೆ ನೀಡುತ್ತಿದ್ದ ಉಪದೇಶಗಳಿಂದಾಗಿ ಅವರ ಆರೋಗ್ಯವು ಕೆಡುತ್ತಾ ಹೋಯಿತು. ಅವರು ಎಳೆಯ ಮಗುವಿನಂತೆ ಜಗನ್ಮಾತೆಯಲ್ಲಿ ಮೊರೆಯಿಟ್ಟರು: ''ತಾಯಿ! ಏಕೆ ಇಂತಹ ಮನುಷ್ಯರನ್ನು ಇಲ್ಲಿಗೆ ಕರೆತರುವೆ? ಒಂದು ಸೇರು ಹಾಲಿಗೆ ಐದು ಸೇರು ನೀರು ಬೆರೆಸಿದ ಜನರು ಅವರು. ಆ ನೀರನ್ನು ಇಂಗಿಸಲು ಒಲೆಯನ್ನು ಊದಿ ಊದಿ ನನ್ನ ಆರೋಗ್ಯವೂ ಹದಗೆಡುತ್ತಿದೆ. ಅದು ನನ್ನ ಶಕ್ತಿಯನ್ನು ಮೀರಿದ್ದಾಗಿದೆ. ಬೇಕಾದರೆ ನೀನೇ ಆ ಕೆಲಸವನ್ನು ಮಾಡು. ಈ ಶರೀರವು ಒಡೆದ ನಗಾರಿಯಂತಾಗಿದೆ. ಅದನ್ನು ಇನ್ನೂ ದಿನನಿತ್ಯ ಬಾರಿಸುತ್ತಾ ಹೋದರೆ, ಅದು ಇನ್ನೆಷ್ಟು ಕಾಲ ಬದುಕೀತು?''

ಶ್ರೀರಾಮಕೃಷ್ಣರಿಗೆ ಅಷ್ಟೊಂದು ಶ್ರಮವಾದರೂ ದಣಿದು ಬಂದ ಜೀವಿಗಳಿಗೆ ಸಾಂತ್ವನ ನೀಡಲು ಅವರು ಸ್ವಲ್ಪವೂ ಹಿಂಜರಿಯುತ್ತಿರಲಿಲ್ಲ. ಅವರು ಭೇಟಿ ಮಾಡದೆ ಯಾರನ್ನೂ ಹಿಂದಕ್ಕೆ

ಕಳುಹಿಸುತ್ತಿರಲಿಲ್ಲ. ದುಃಖದಲ್ಲಿರುವ ಅಜ್ಞಾನಿಗಳ ಮೇಲಿದ್ದ ಅಪಾರ ಕರುಣೆಯು ಅವರ ದೈಹಿಕ ತೊಂದರೆ, ಕಾಯಿಲೆಗಳನ್ನು ಮರೆಸಿಬಿಡುತ್ತಿತ್ತು. 'ಒಬ್ಬ ಜೀವಿಗೆ ಸಹಾಯವಾಗುವುದಾದರೆ ನಾನು ಮತ್ತೆ ಇಪ್ಪತ್ತು ಸಾವಿರ ದೇಹಗಳನ್ನು ಧರಿಸಲೂ ಸಿದ್ಧ' ವೆಂದು ಅವರು ಹೇಳುತ್ತಿದ್ದರು.

ಜನಸಾಮಾನ್ಯರಿಗೆ ಪವಾಡಗಳನ್ನು ಮಾಡುವವರೆಂದರೆ ಹೆಚ್ಚು ಆಸಕ್ತಿ. ಹಾಗೆ ಪವಾಡ ಮಾಡುವ ಬಾಬಾಗಳ ಹತ್ತಿರ ಜನ ಮುಗಿಬೀಳುತ್ತಾರೆ. ಕೆಲವು ವೇಳೆ ಶಿಷ್ಯರು ದಂತಕತೆಗಳನ್ನು ಕಟ್ಟಿ ಪ್ರಚಾರ ಮಾಡುವುದೂ ಉಂಟು. ಪವಾಡಸದೃಶವಾದ, ಆದರೆ ನಿಜವಾದ ಘಟನೆಯನ್ನು ಇಲ್ಲಿ ಹೇಳಲಾಗಿದೆ. ಶ್ರೀರಾಮಕೃಷ್ಣರ ಸೇವೆ ಮಾಡಿಕೊಂಡಿರಲು 'ಲಾಟು' ಎಂಬ ಬಿಹಾರದ ಒಬ್ಬ ಹುಡುಗ ಬಂದಿದ್ದ. ಆತನಿಗೆ ಓದು-ಬರಹ ಬರುತ್ತಿರಲಿಲ್ಲ. ಅತ್ಯಂತ ಶ್ರದ್ಧೆ ಮತ್ತು ಭಕ್ತಿಯಿಂದ ಶ್ರೀರಾಮಕೃಷ್ಣರ ಸೇವೆ ಮಾಡುತ್ತಿದ್ದ. ಅದೊಂದೇ ಅವನಿಗೆ ಗೊತ್ತು. ಆತನಿಗೆ ಗುರುಕೃಪೆ ದೊರೆಯಿತು. ಮುಂದೆ ಆತ ಸ್ವಾಮಿ ಅದ್ಭುತಾನಂದರೆಂಬ ಶಿಷ್ಯರಾದರು, ಧನ್ಯತೆಯನ್ನು ಪಡೆದುಕೊಂಡರು. **'ಹರ ಕಾರುಣ್ಯವಿರಲಿಕ್ಕೆ ಬಡವಂ ಬಲ್ಲಿದನಾಗನೆ?'** ಎಂಬುದು ಸೋಮೇಶ್ವರ ಶತಕದ ವಚನ. ಇದು ಅದ್ಭುತವೇ ಸರಿ. ಇದು ಎಲ್ಲಾ ಶ್ರದ್ಧಾವಂತ ಸಾಧಕರಿಗೆ ಭರವಸೆಯನ್ನು ನೀಡುವಂತಹ ವಿಚಾರ.

ಕೆಲವು ಪ್ರಾರಂಭದ ಸಾಧಕರು ಯೋಚಿಸಬಹುದು: 'ನಾವು ಅದೃಷ್ಟವಂತರಲ್ಲ. ನಮಗೆ ಗುರುಕೃಪೆ ದೊರೆಯುವುದೆ?' ಆದರೆ ಹಾಗೆ ನಿರಾಶರಾಗಬೇಕಿಲ್ಲ. ಗುರುಕೃಪೆಯೆಂಬುದು ಸೂರ್ಯನ ಕಿರಣಗಳ ಹಾಗೆ; ಎಲ್ಲಾ ಕಡೆ ಒಂದೇ ಸಮನಾಗಿ ಹರವಿಕೊಂಡಿರುತ್ತದೆ. ಅದನ್ನು ಪಡೆದುಕೊಳ್ಳಲು ಅರ್ಹತೆಯನ್ನು ಹೊಂದಿರಬೇಕು. ವ್ಯಾಕುಲತೆ ಇರಬೇಕು. ಆಗ ಗುರು ಕೃಪೆ ದೊರೆಯುವುದು ಖಂಡಿತ.

ಇಂತಹ ಅವ್ಯಾಜ ಕರುಣೆ, ಅನುಕಂಪಗಳನ್ನು ನಾವು ಶ್ರೀ ರಮಣಮಹರ್ಷಿಗಳಲ್ಲಿಯೂ ಕಾಣುತ್ತೇವೆ. ಅವರ ದರ್ಶನಕ್ಕಾಗಿ ಜನರು ಹಗಲು ರಾತ್ರಿ ಬರುತ್ತಿದ್ದರು. ಅವರ ಶಿಷ್ಯರು ಸೇರಿ ಒಂದು ನಿಯಮ ಮಾಡಿದರು. ಮಧ್ಯಾಹ್ನ ೧೨ ಗಂಟೆಯಿಂದ ೨ ಗಂಟೆಯವರೆಗೆ ಮಹರ್ಷಿಗಳು ಯಾರನ್ನೂ ಭೇಟಿಯಾಗುವುದಿಲ್ಲ. ಅದು ಅವರ ವಿಶ್ರಾಂತಿಯ ಸಮಯ ಎಂದು ತೀರ್ಮಾನಿಸಿದರು. ಆದರೆ ಅದನ್ನು ಶ್ರೀ ರಮಣರಿಗೆ ತಿಳಿಸಿರಲಿಲ್ಲ. ಆ ನಿಯಮವನ್ನು ಶ್ರೀರಮಣರು ಒಪ್ಪಲಿಲ್ಲ. ಅವರು ಹೇಳಿದರು: ''ಎಷ್ಟೋ ದೂರದಿಂದ ಕಷ್ಟಪಟ್ಟು ನನ್ನನ್ನು ನೋಡುವುದಕ್ಕಾಗಿ ಜನರು ಬರುತ್ತಾರೆ. ಅವರಿಗೆ ಕಾಯಲು ಸಮಯ ಇರುವುದಿಲ್ಲ. ಆದುದರಿಂದ ಈ ನಿರ್ಬಂಧ ಬೇಡ'' ಎಂದು ಹೇಳಿ ಅವರು ಬಂದು ಹಜಾರದಲ್ಲಿ ಕುಳಿತುಬಿಟ್ಟರು. ಇದು ಸದ್ಗುರುಗಳಲ್ಲಿ ಕಾಣಬರುವ ಅಹೇತುಕ ಪ್ರೀತಿ, ಅನುಕಂಪ.



ಜ್ಞಾನಿಗಳೂ, ಮಹಾತ್ಮರೂ ಆದ ಅನೇಕ ಸಂತರು ಭಾರತದಲ್ಲಿ ಆಗಿ ಹೋಗಿದ್ದಾರೆ. ಅವರು ದೀನ, ದುಃಖಿ ಮನುಷ್ಯರಿಗೆ ಅಲ್ಲದೆ ಪಶು - ಪ್ರಾಣಿಗಳಿಗೂ ಅನುಕಂಪವನ್ನು ತೋರಿಸಿದ್ದಾರೆ. ಎಲ್ಲರಲ್ಲಿಯೂ, ಎಲ್ಲೆಲ್ಲಿಯೂ ಪರಮಾತ್ಮನನ್ನು ಕಾಣುವ ಸಂತರು ಸಕಲ ಜೀವಗಳಲ್ಲಿ ದಯೆಯನ್ನು ಹೊಂದಿದ್ದರು. ಒಂದು ಉದಾಹರಣೆಯನ್ನು ನೋಡೋಣ. ಏಕನಾಥ ಮಹಾರಾಜರು ಉತ್ತರ ಭಾರತದ ತೀರ್ಥಯಾತ್ರೆಗೆ ಹೋಗಿದ್ದರು. ಅಲ್ಲಿಂದ ಪವಿತ್ರ ಗಂಗಾಜಲವನ್ನು ಬಿಂದಿಗೆಯಲ್ಲಿ ತುಂಬಿಕೊಂಡು, ಕಾವಡಿಯಲ್ಲಿ (ಅಡ್ಡೆ) ಹೊತ್ತುಕೊಂಡು ಬರುತ್ತಿದ್ದರು. ಅವರ ಜೊತೆಯಲ್ಲಿ ಅವರ ಶಿಷ್ಯನೂ ಬರುತ್ತಿದ್ದ. ಉತ್ತರ ಭಾರತದಿಂದ ಗಂಗಾಜಲವನ್ನು ರಾಮೇಶ್ವರಕ್ಕೆ ಕೊಂಡುಹೋಗಿ, ರಾಮೇಶ್ವರ ಲಿಂಗಕ್ಕೆ ಅಭಿಷೇಕ ಮಾಡುವುದು ಸಂಪ್ರದಾಯ. ಆಗಿನ ಕಾಲದಲ್ಲಿ ರೈಲು, ಬಸ್ಸು ಇರಲಿಲ್ಲ. ಬೇಸಿಗೆಯ ಉರಿಬಿಸಿಲು, ಕೆಳಗೆ ನೆಲವೂ ಕಾಯುತ್ತಿದೆ. ಆಗ ದಾರಿಯಲ್ಲಿ ಒಂದು ಕತ್ತೆಯು ಬಾಯಾರಿ, ನೀರು ಸಿಗದೆ ಏದುಸಿರು ಬಿಡುತ್ತಾ ಒದ್ದಾಡುತ್ತಿತ್ತು. ಅದು ಸಾವಿನ ಅಂಚಿನಲ್ಲಿತ್ತು. ಏಕನಾಥ ಮಹಾರಾಜರು ಅಲ್ಲಿ ನಿಂತರು. ಸ್ವಲ್ಪ ಗಂಗಾಜಲವನ್ನು ಆ ಕತ್ತೆಯ ಬಾಯಿಗೆ ಹಾಕಿದರು. ಆ ಕತ್ತೆ ಕಣ್ಣು ಬಿಟ್ಟು ನೋಡಿ ಬಾಯಿ ತೆರೆಯಿತು. ಏಕನಾಥರು ಅದಕ್ಕೆ ಇನ್ನಷ್ಟು ನೀರನ್ನು ಕುಡಿಸಿದರು. ಅದಕ್ಕೆ ಹೋದ ಜೀವ ಬಂದಂತಾಯಿತು. ಅದಕ್ಕೆ ಹೊಟ್ಟೆ ತುಂಬಾ ನೀರು ಕುಡಿಸಿದರು. ಅದು ಮೇಲಕ್ಕೆದ್ದು ನಡೆಯಲಾರಂಭಿಸಿತು. ಆಗ ಅವರ ಶಿಷ್ಯ ಏಕನಾಥರನ್ನು ಕೇಳಿದ: ''ಸ್ವಾಮಿ, ರಾಮೇಶ್ವರನಿಗಾಗಿ ದೂರದಿಂದ ಹೊತ್ತು ತಂದ ನೀರನ್ನು ಕತ್ತೆಗೆ ಕುಡಿಸಿದಿರಲ್ಲಾ! ರಾಮೇಶ್ವರ ಯಾತ್ರೆಯ ಫಲವನ್ನು ಕಳೆದುಕೊಂಡಿರಿ.'' ಅದಕ್ಕೆ ಏಕನಾಥರು ಹೇಳಿದರು: ''ಈ ಮೂಕ ಪ್ರಾಣಿಯ ರೂಪದಲ್ಲಿರುವ ಭಗವಂತನು ಸಂತೋಷಪಡುವುದರಿಂದ ಸಾವಿರ ಸಲ ಯಾತ್ರೆ ಮಾಡಿದ ಪುಣ್ಯವು ಲಭಿಸಿದಂತಾಗುತ್ತದೆ.'' ಜ್ಞಾನಿಗಳ ಹೃದಯವು ಕರುಣೆಯ ಅಮೃತ ಕಲಶವಾಗಿರುತ್ತದೆ. ಅಂತಹ ಗುರುಗಳು ಲೋಕದ ಜನರಿಗೆ ಜ್ಞಾನವನ್ನು ಧಾರೆ ಎರೆಯುವುದರಲ್ಲಿ ಏನೂ ಆಶ್ಚರ್ಯವಿಲ್ಲ. ಅವರು ಉಪದೇಶ ಮಾಡದೆ ಇರಲಾರರು.

ನಿಜಗುಣ ಶಿವಯೋಗಿಗಳು ತಮ್ಮ 'ಪರಮಾನುಭವ ಬೋಧೆ'ಯ ನಾಂದಿ ಪದ್ಯದಲ್ಲಿ ಸದ್ಗುರುವನ್ನು ಕುರಿತು ಹೀಗೆ ಪ್ರಾರ್ಥಿಸುತ್ತಾರೆ: **'ಕರುಣಾರಸದ ಕೋಡಿವರೆವ ಕಟಾಕ್ಷದ, ಪರತತ್ತ್ವವರುಪುವ ಆಲಾಪದ, ವರಪುಣ್ಯಮಯ ಶರೀರದ ನಿರಾಭಾರಿ ಸದ್ಗುರುವಿರಲೆನ್ನ ಮಾನಸದಲ್ಲಿ.'**

ಶ್ರೀರಾಮಕೃಷ್ಣರು ಭಕ್ತರಿಗೆ ಕೃಪೆತೋರಿದ, ಸಂತರ ಇತಿಹಾಸ ದಲ್ಲಿಯೇ ವಿಶಿಷ್ಟವಾದ, ಅನನ್ಯವಾದ ಒಂದು ಘಟನೆಯು ೧೮೮೬ರ ಜನವರಿ ೧ನೆಯ ತಾರೀಖಿನಂದು ನಡೆಯಿತು. ಆಗ ಶ್ರೀರಾಮಕೃಷ್ಣರು ಕಾಶೀಪುರದ ತೋಟದ ಮನೆಯಲ್ಲಿ ಗಂಟಲಿನ ಕಾಯಿಲೆಗೆ ಚಿಕಿತ್ಸೆ ಪಡೆಯುತ್ತಿದ್ದರು. ಅಂದು ಮಧ್ಯಾಹ್ನ ಮೂರು ಗಂಟೆಯ ಸಮಯ. ಅವರಿಗೆ ಏನೋ ಒಂದು ರೀತಿಯ ಉತ್ಸಾಹ ಬಂದು, ಮಹಡಿಯಿಂದ ಕೆಳಗೆ ಇಳಿದು ಬಂದರು. ಕೆಳಗೆ ಹಜಾರ ದಲ್ಲಿದ್ದವರು ಪ್ರಣಾಮ ಮಾಡಿದರು. ಕೆಲವರು ಅಲ್ಲಲ್ಲಿ ಮರಗಳ ಕೆಳಗೆ ಕುಳಿತಿದ್ದರು. ಪರಮಹಂಸರು ಅಲ್ಲಿದ್ದ ಪ್ರತಿಯೊಬ್ಬರ ತಲೆಯ ಮೇಲೂ ತಮ್ಮ ಕೃಪಾಹಸ್ತವನ್ನಿಟ್ಟು ''ನೀವು ಚೈತನ್ಯವಂತ ರಾಗಿ'' ಎಂದು ಆಶೀರ್ವದಿಸಿದರು. ಪ್ರತಿಯೊಬ್ಬರೂ ಆನಂದ ಪರವಶರಾದರು. ಕೆಲವರು ಕುಣಿದಾಡಿದರು. ಕೆಲವರು ಧ್ಯಾನಸ್ಥ ರಾದರು. ಅಂದು ಅಲ್ಲಿದ್ದ ಭಕ್ತರೇ ಭಾಗ್ಯವಂತರು. ಅವರೆಲ್ಲರೂ ಪುನೀತರಾದರು. ಈಗಲೂ ಪ್ರತಿವರ್ಷ ಜನವರಿಯ ೧ನೆಯ ತಾರೀಖಿನ ದಿನವನ್ನು ಎಲ್ಲ ರಾಮಕೃಷ್ಣಾಶ್ರಮಗಳಲ್ಲಿ '**ಕಲ್ಪತರು ದಿವಸ**' ಎಂದು ಆಚರಿಸಲಾಗುತ್ತದೆ. ಇದು ಶ್ರೀರಾಮಕೃಷ್ಣ ಪರಮಹಂಸರ ಅವ್ಯಾಜ ಕರುಣೆಯ ಉದಾಹರಣೆ.

ಸದ್ಗುರುವಿನ ಕೃಪೆ ಹೇಗೆಂದರೆ, 'ಭಜತಾಂ ಕಲ್ಪವೃಕ್ಷಾಯ, ನಮತಾಂ ಕಾಮಧೇನವೇ.'' ಅದರಿಂದಲೆ ಅವರು ಪೂಜ್ಯರು, ಲೋಕಮಾನ್ಯರು.

ಶ್ರೀ ರಮಣಮಹರ್ಷಿಗಳು ಅನೇಕರಿಗೆ ತಮ್ಮ ಕೃಪಾದೃಷ್ಟಿ ಯಿಂದಲೇ ಜ್ಞಾನವನ್ನು ದಯಪಾಲಿಸಿದರು. ಪಾಲ್ ಬ್ರಂಟನ್ ಎಂಬಾತನು ತನ್ನ ಪುಸ್ತಕ 'A Search in Secret India' ದಲ್ಲಿ ತನಗಾದ ಅನುಭವವನ್ನು ಹೇಳಿಕೊಂಡಿದ್ದಾನೆ.[೧] ಬೆಳಗೆರೆ ಕೃಷ್ಣ ಶಾಸ್ತ್ರಿಗಳು ಶ್ರೀರಮಣ ಮಹರ್ಷಿಗಳ ದರ್ಶನಕ್ಕೆ ಹೋಗಿದ್ದರು. ಅವರು ಸ್ವಲ್ಪದೂರದಲ್ಲಿ ನಿಂತಿದ್ದರು. ಏನೂ ಮಾತನಾಡಲಿಲ್ಲ. ಶ್ರೀ ರಮಣರ ದಿವ್ಯಚಕ್ಷುಗಳು ಕೃಷ್ಣಶಾಸ್ತ್ರಿಗಳನ್ನು ಮುಟ್ಟಿದವು. ಅವರ ಹೃದಯವನ್ನು ತಟ್ಟಿದವು. ಅವರಿಗೆ ಅನಿರ್ವಚನೀಯ ಆನಂದವುಂಟಾಯಿತು.[೨] ಇನ್ನೂ ಅನೇಕರಿಗೆ ಈ ರೀತಿಯ ಅನು ಭವವಾಗಿರುವುದರ ಉಲ್ಲೇಖವಿದೆ. ಶ್ರೀರಾಮಕೃಷ್ಣರೂ ಕೇವಲ ಸಂಕಲ್ಪದಿಂದ, ಸ್ಪರ್ಶದಿಂದ ಆಧ್ಯಾತ್ಮಿಕ ಜಾಗೃತಿ ಮಾಡುವಂತಹ ಅಪಾರ ಶಕ್ತಿಯನ್ನೂ, ಕರುಣೆಯನ್ನೂ ಹೊಂದಿದ್ದರು.

ತಮಗೆ ಸಮಾಧಿಯ ಆನಂದವನ್ನು ಮಾಡಿಸಲು ಶ್ರೀರಾಮ ಕೃಷ್ಣರಲ್ಲಿ ಅರಿಕೆ ಮಾಡಿಕೊಳ್ಳಬೇಕೆಂದು ಶ್ರೀಮಾತೆ ಶಾರದಾದೇವಿ ಯವರು ಒಂದು ಸಲ ಯೋಗಿನ್ ಮಾ-ಳನ್ನು ಕೇಳಿದರು. ಯೋಗಿನ್ ಮಾ ಶ್ರೀರಾಮಕೃಷ್ಣರನ್ನು ಕೇಳಿದಳು: ''ಶ್ರೀಮಾತೆ ಯವರಿಗೆ ಸಮಾಧಿಯ ಅನುಭವವನ್ನು ಕರುಣಿಸಿ.'' ಶ್ರೀರಾಮ ಕೃಷ್ಣರು ಏನೂ ಮಾತನಾಡದೆ ಗಂಭೀರವಾಗಿ ಕುಳಿತುಬಿಟ್ಟರು. ಯೋಗೀನ್ ಮಾ ಸುಮ್ಮನೆ ಹಿಂದಿರುಗಿ ಬಂದರು. ಆಗ ಶ್ರೀ ಶಾರದಾದೇವಿಯವರು ಪೂಜೆಯಲ್ಲಿ ನಿರತರಾಗಿದ್ದರು. ಒಮ್ಮೊಮ್ಮೆ ಅಳುತ್ತಲೂ, ಒಮ್ಮೊಮ್ಮೆ ನಗುತ್ತಲೂ ಇದ್ದರು. ಅವರ ಕೆನ್ನೆಯ ಮೇಲೆ ಕಣ್ಣೀರು ಹರಿಯುತ್ತಿತ್ತು. ಆಮೇಲೆ ಅವರು ಧ್ಯಾನದಲ್ಲಿ ಮಗ್ನರಾದರು. ಅನಂತರ ಯೋಗಿನ್ ಮಾ ಕೇಳಿದರು: ''ನಿಮಗೆ ಸಮಾಧಿಯ ಅನುಭವವಾಗಿಲ್ಲವೆಂದು ನೀವೇಕೆ ಹೇಳಿದಿರಿ?'' ಶ್ರೀಶಾರದಾದೇವಿಯವರು ನಕ್ಕು ಸುಮ್ಮನಾದರು.

ಸಾಮಾನ್ಯ ಮನುಷ್ಯರಿಗೂ, ಸಂಶಯಾತ್ಮರಿಗೂ ಇದು ಅರ್ಥ ವಾಗುವುದು ಕಷ್ಟ. ಆದರೆ ಯಾರು ಶ್ರದ್ಧೆ ಮತ್ತು ವಿಶ್ವಾಸದಿಂದ ಸದ್ಗುರುವಿನ ಬಳಿ ಸಾರಿ ಅವರ ಕೃಪೆಯನ್ನು ಅನುಭವಿಸುವರೋ ಅವರೇ ಧನ್ಯರು. ಅಂತಹ ಸದ್ಗುರುಗಳ ಮತ್ತು ಶಿಷ್ಯರ ಉದಾ ಹರಣೆಗಳು ಆಧ್ಯಾತ್ಮಿಕ ಪರಂಪರೆಯಲ್ಲಿ ಹೇರಳವಾಗಿ ದೊರೆಯು ತ್ತವೆ. ಅವು ಸಾಧಕರಿಗೆ ಸ್ಫೂರ್ತಿಯನ್ನು ನೀಡಿ, ನಿಷ್ಠೆಯನ್ನು ಹೆಚ್ಚು ಮಾಡುತ್ತವೆ.

ಶ್ರದ್ಧೆಯುಳ್ಳ ಸಾವಿರಾರು ಭಕ್ತರು ಆ ಸದ್ಗುರುಗಳ ದಿವ್ಯ ಸನ್ನಿಧಿಯನ್ನು ಈಗಲೂ ಅನುಭವಿಸುತ್ತಿದ್ದಾರೆ, ಮತ್ತು ತಮ್ಮ ಜೀವನವನ್ನು ಸಾರ್ಥಕಗೊಳಿಸಿಕೊಳ್ಳುತ್ತಿದ್ದಾರೆ. ಅಂತಹ ಸದ್ಗುರು ಗಳ ಕೃಪೆಯು ಸದಾ ನಮ್ಮ ಮೇಲಿರಲಿ. ನಮ್ಮನ್ನು ಗುರಿಯೆಡೆಗೆ ಕೈ ಹಿಡಿದು ನಡೆಸುತ್ತಿರಲಿ. ಈ ಲೇಖನವನ್ನು ಒಂದು ಸುಂದರ ಗೀತೆಯ ಸಾಲುಗಳಿಂದ ಮುಗಿಸುತ್ತೇನೆ:

ತವ ಕೃಪೆ ಬೆಳಗಲಿ, ಭವಭ್ರಮೆ ಕಳೆಯಲಿ
ಶಿವೆ ಶ್ರೀ ಶಾರದೆ ತವಕದಿ ಮೊರೆಯುವೆ ।
ನಿನ್ನಡಿದಾವರೆ ಎನ್ನಯ ಆಸರೆ
ಮನ್ನಿಸು ದಾಸನ ಬಿನ್ನಹ ಮಾತೆ ॥

''ನೀವು ಪ್ರಾರ್ಥಿಸುವಾಗ ನಿಮ್ಮ ಕೋಣೆಯೊಳಗೆ ಹೋಗಿ ಬಾಗಿಲು ಮುಚ್ಚಿಕೊಂಡು ಭಗವಂತನಿಗೆ ರಹಸ್ಯ ವಾಗಿ ಪ್ರಾರ್ಥನೆ ಸಲ್ಲಿಸಿ. ರಹಸ್ಯದಲ್ಲಿ ನಿಮ್ಮನ್ನು ನೋಡುವ ಭಗವಂತನು ನಿಮಗೆ ಮುಚ್ಚುಮರೆಯಿಲ್ಲದೆ ಪ್ರತಿಫಲ ವನ್ನು ಕರುಣಿಸುತ್ತಾನೆ.

''ಏನು ತಿನ್ನಲಿ, ಏನು ಕುಡಿಯಲಿ, ಏನು ಉಡಲಿ ಎಂದು ಚಿಂತಿಸದಿರಿ. ನಿಮಗೆ ಇವೆಲ್ಲ ಅಗತ್ಯವೆನ್ನುವುದು ಭಗವಂತನಿಗೆ ತಿಳಿದಿದೆ. ಬದಲಾಗಿ, ಭಗವಂತನ ರಾಜ್ಯಕ್ಕೆ, ಆತನ ಅಪೇಕ್ಷೆಗೆ ಮೊದಲ ಸ್ಥಾನವನ್ನು ಕೊಡಿ. ಆತ ಈ ಎಲ್ಲ ಇತರ ವಸ್ತುಗಳನ್ನು ತಾನೇ ನಿಮಗೆ ಒದಗಿಸುತ್ತಾನೆ.''

— ಯೇಸು ಕ್ರಿಸ್ತ

೧ ಪಾಲ್ ಬ್ರಂಟನ್‌ರಿಗೂ ಮಹರ್ಷಿಗಳಿಗೂ ಸಂಭಾಷಣೆ ನಡೆಯಿತು. ಅದರ ದಾಖಲೆ ಆ ಪುಸ್ತಕದಲ್ಲಿದೆ. *(ಕನ್ನಡದಲ್ಲಿ ಈ ಗ್ರಂಥ '**ನಿಗೂಢ ಭಾರತದಲ್ಲೊಂದು ಹುಡುಕಾಟ**' ಎಂದು ಪ್ರಕಟವಾಗಿದೆ.)*

೨ ಕೃಷ್ಣಶಾಸ್ತ್ರಿಗಳು ತಮ್ಮ ಅನುಭವವನ್ನು ಈ ಲೇಖಕನೊಡನೆ ಹಂಚಿಕೊಂಡಿದ್ದರು.